ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 42-46
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕೃಷಿ ಕಾರ್ಮಿಕರ ವಲಸೆ: ಒಂದು ಅಧ್ಯಯನ

**ಬಸವರಾಜ ಹೆಚ್.ಬಿ**

ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

***Abstract:***

*ಸಾಮಾನ್ಯವಾಗಿ ಜನರು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬೇರೆಡೆಗೆ ಹೋಗಿ ನೆಲೆಸುವುದನ್ನು ವಲಸೆ ಎಂದು ಕರೆಯಬಹುದಾಗಿದೆ. ವಲಸೆ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ವಲಸೆಗೆ ಹಲವಾರು ಕಾರಣಗಳಿದ್ದರೂ ಕೂಡ ಜೀವನ ನಿರ್ವಹಣೆಗೆ ವಿವಿಧ ವರ್ಗದ ಜನರು ಒಂದೆಡೆಯಿಂದ ಮತ್ತೊಂದೆಡೆಗೆ ಹೋಗಿ ನೆಲೆಸುತ್ತಾರೆ. ಅವರಲ್ಲಿ ಕಾರ್ಮಿಕರು ಪ್ರಮುಖರಾಗಿದ್ದಾರೆ. ಸ್ಥಳೀಯವಾಗಿ ಉದ್ಯೋಗ ಸಿಗದ ಸಂದರ್ಭದಲ್ಲಿ ಉದ್ಯೋಗ ಅರಸಿಕೊಂಡು ಇತರೆ ಪ್ರದೇಶಗಳಿಗೆ ಮುಖ್ಯವಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಸಾಮಾನ್ಯವಾಗಿರುತ್ತದೆ. ಪ್ರಸ್ತುತ ಲೇಖನದಲ್ಲಿ ಕೃಷಿ ಕಾರ್ಮಿಕರ ವಲಸೆಯನ್ನು ಕುರಿತು ಚರ್ಚಿಸಲಾಗಿದೆ.*

***Keywords:*** *ಬಡತನ, ಉದ್ಯೋಗ, ವಲಸೆ, ಕೃಷಿ ಕಾರ್ಮಿಕರು.*

## ಪೀಠಿಕೆ

ಕರ್ನಾಟಕ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಎಂಟನೇ ರಾಜ್ಯವಾಗಿದ್ದು, ಅತಿ ಹೆಚ್ಚು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಪ್ರಮುಖ ಆರ್ಥಿಕತೆ ಕೃಷಿ ಮತ್ತು ಕೃಷಿಕೂಲಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಆರ್ಥಿಕತೆಯ ಸ್ವರೂಪ ಬದಲಾಗುತ್ತಿದೆ. ಈ ಕಾರಣದಿಂದ ಗ್ರಾಮೀಣ ಪ್ರದೇಶದ ಜೀವನ ಸ್ವರೂಪದಲ್ಲಿಯೂ ಕೂಡ ಅನೇಕ ಬದಲಾವಣೆಗಳು ಜರುಗುತ್ತಿವೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಬಹುತೇಕ ಜನರು ಇಂದಿಗೂ ಕೂಡ ಬಡತನ ನಿರುದ್ಯೋಗದಂತಹ ಸಮಸ್ಯೆಗಳ ಜೊತೆಗೆ ಆಹಾರ, ವಸತಿ, ಬಟ್ಟೆ, ಶಿಕ್ಷಣ, ನೈರ್ಮಲ್ಯ ಮತ್ತು ಆರೋಗ್ಯ ರಕ್ಷಣೆಯಂತಹ ಜೀವನದ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಬಹುತೇಕ ಕಾರ್ಮಿಕರಿಗೆ ಋತುಮಾನದಲ್ಲಿ ಮಾತ್ರ ಉದ್ಯೋಗ ದೊರೆಯುತ್ತದೆ. ಆದ ಕಾರಣ ತಮ್ಮ ಜೀವನ ನಿರ್ವಹಣೆಗೆ ವಲಸೆ ಹೋಗುವುದು ಅನಿವಾರ್ಯವಾಗಿದೆ.

## ವಲಸೆಯ ಅರ್ಥ ಮತ್ತು ವ್ಯಾಖ್ಯೆಗಳು

ವಲಸೆ ಎಂಬ ಪದವು ಲ್ಯಾಟಿನ್ ಭಾಷೆಯ ಮೂಲ ಪದವಾದ ಮೈಗ್ರೇರ್ (Migrare) ಎಂಬ ಪದದಿಂದ ಬಂದಿದೆ. ಈ ಪದದ ಅರ್ಥ 'ವಾಸಸ್ಥಳದ ಬದಲಾವಣೆ'ಯಾಗಿದೆ. ವಲಸೆ ಎಂದರೆ ಒಬ್ಬ ವ್ಯಕ್ತಿ ಅಥವಾ ಜನರ ಗುಂಪು (ಕುಟುಂಬ) ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರವಾಗುವ ಪ್ರಕ್ರಿಯೆಯಾಗಿದೆ.

ಅಂತರಾಷ್ಟ್ರೀಯ ಸಮಾಜ ವಿಜ್ಞಾನಗಳ ವಿಶ್ವಕೋಶದಲ್ಲಿ ವಲಸೆಯನ್ನು "A relatively

***Please cite this article as:*** ಬಸವರಾಜ ಹೆಚ್.ಬಿ. (2023). ಕೃಷಿ ಕಾರ್ಮಿಕರ ವಲಸೆ: ಒಂದು ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 42–46.

permanent movement of persons over a significant distance" ಎಂದು ವಿವರಿಸಿದೆ. ಭಾರತದ ಜನಗಣತಿ(2011) ಪ್ರಕಾರ ಹುಟ್ಟಿದ ಸ್ಥಳ ಅಥವಾ ವಾಸಸ್ಥಳ ಬದಲಾವಣೆಯನ್ನು ವಲಸೆಯೆಂದು ಪರಿಗಣಿಸಲಾಗಿದೆ. ಜನಗಣತಿಯ ಸಂದರ್ಭದಲ್ಲಿ ಮಾಹಿತಿ ಸಂಗ್ರಹಿಸುವಾಗ ಒಬ್ಬ ವ್ಯಕ್ತಿ ಆತ ವಾಸಿಸುವ ಸ್ಥಳದಲ್ಲಿ ಜನಿಸಿರದಿದ್ದಲ್ಲಿ ಆತನನ್ನು ವಲಸಿಗ ಎಂದು ಪರಿಗಣಿಸಲಾಗುತ್ತದೆ.

ವಲಸೆಯನ್ನು ಸ್ಥಳೀಯವಾಗಿ ಗುಳೆ ಹೋಗುವುದು ಎಂದೂ ಕೂಡ ಬಳಸಲಾಗುತ್ತಿದೆ. ವಲಸೆ ಒಂದು ಸಾಮಾಜಿಕ ಪ್ರಕ್ರಿಯೆಯಾಗಿದೆ. ಒಂದು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಪ್ರತಿಯೊಂದು ಸಮಾಜದಲ್ಲೂ ನಿರಂತರವಾಗಿ ನಡೆಯುವ ಪರಿಕಲ್ಪನೆಯಾಗಿದೆ. ಮೂಲನಿವಾಸಿಗಳು, ಪ್ರವಾಸಿಗರು, ಸಂದರ್ಶಕರು, ನಿರಾಶ್ರಿತರು ವಲಸೆಗಾರರಾಗಿರುವುದಿಲ್ಲ. ವಲಸೆಯಲ್ಲಿ ಶಾಶ್ವತ ವಲಸೆ, ತಿರುವಲಸೆ ಮತ್ತು ಋತುಮಾನ ವಲಸೆ ಎಂಬ ಅಂಶಗಳು ಕಂಡುಬರುತ್ತವೆ.

### ಸಾಹಿತ್ಯ ಪರಾಮರ್ಶೆ

ವಲಸೆ ಕುರಿತು ಹಲವಾರು ಅಧ್ಯಯನಗಳು ನಡೆದಿದ್ದು, ವಲಸೆಗೆ ಕಾರಣಗಳು ಮತ್ತು ಅದರಿಂದಾಗುವ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ವಾನಿ ಎಂ.ಎಚ್ ಮತ್ತು ಇತರರು (2011) ತಮ್ಮ ಸಂಶೋಧನಾ ಲೇಖನದಲ್ಲಿ ಕೈಗಾರಿಕಾ ಕಾರ್ಮಿಕರಿಗೆ ಹೋಲಿಸಿದರೆ ಕೃಷಿ ಕೂಲಿ ದರವು ಕಡಿಮೆಯಿದೆ. ಹಾಗಾಗಿ ಗ್ರಾಮೀಣ ಪ್ರದೇಶದ ಯುವಕರು ಉತ್ತಮ ಶಿಕ್ಷಣ, ಉದ್ಯೋಗ ಅರಸಿ ನಗರ ಪ್ರದೇಶಗಳಲ್ಲಿ ವಲಸೆ ಹೋಗುತ್ತಾರೆ ಎಂದು ಹೇಳಿದ್ದಾರೆ.

ದೊಡ್ಡಮನಿಕೆ.ಎನ್ (2014) ತಮ್ಮ ಸಂಶೋಧನಾ ಪ್ರಬಂಧದಲ್ಲಿ ಪ್ರಾದೇಶಿಕ ಅಸಮಾನತೆಯು ಕೃಷಿಯ ಋತುಮಾನದ ವಲಸೆ ಹೆಚ್ಚಲು ಪ್ರಮುಖ ಕಾರಣವಾಗಿದೆಎಂದು ವಾದಿಸಿದ್ದಾರೆ. ಮುಂದುವರೆದು ವಲಸೆ ಕಾರ್ಮಿಕರಲ್ಲಿ ಹೆಚ್ಚಿನವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಾಗಿದ್ದಾರೆ. ಇವರಲ್ಲದೆ ವೇಣು, ಬಿ.ಎನ್ ಮತ್ತು ಇತರರು (2016), ಎಂ.ಎಸ್. ಸಿದ್ದು, ಪಿ.ಎಸ್. ರಂಗಿ ಮತ್ತು ಕೆ. ಸಿಂಗ್ (1997), ತಿಲಕ್ ಸನ್ಯಾಲ್ ಮತ್ತು ಕಿಂಗ್‌ಸುಕ್ ಮೈಟಿ (2018), ಮುಂತಾದವರು ವಲಸೆ ಮತ್ತು ವಲಸೆಯಿಂದಾಗುವ ಸಂಭವನೀಯ ಪರಿಣಾಮದ ಬಗ್ಗೆ ಚರ್ಚಿಸಿದ್ದಾರೆ.

### ಉದ್ದೇಶಗಳು

- ಕೃಷಿ ಕಾರ್ಮಿಕರ ಸಮಸ್ಯೆಗಳನ್ನು ತಿಳಿಯುವುದು.
- ಕೃಷಿ ಕಾರ್ಮಿಕರ ವಲಸೆಗೆ ಕಾರಣಗಳು ಮತ್ತು ಪರಿಣಾಮಗಳನ್ನು ತಿಳಿಯುವುದು.

### ಸಂಶೋಧನಾ ವಿಧಾನ

ಪ್ರಸ್ತುತ ಅಧ್ಯಯನಕ್ಕೆ ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ.

### ಕೃಷಿಕಾರ್ಮಿಕರ ವಲಸೆಗೆ ಕಾರಣಗಳು

ಯಾವುದೇ ಪ್ರದೇಶದ ಜನರು ಕಾರಣವಿಲ್ಲದೆ ಹುಟ್ಟಿದ ಸ್ಥಳವನ್ನು ಬಿಡುವುದಿಲ್ಲ. ಬದಲಿಗೆ ಹಲವು ಕಾರಣಗಳಿವೆ. ಅವುಗಳೆಂದರೆ ತಳ್ಳುವ ಕಾರಣಗಳು ಮತ್ತು ಸೆಳೆಯುವ ಕಾರಣಗಳು. ಬಡತನ, ನಿರುದ್ಯೋಗ, ಕಡಿಮೆ ಕೂಲಿ ಇವುಗಳು ತಳ್ಳುವ ಕಾರಣಗಳಾಗಿದ್ದರೆ, ನಗರಗಳಲ್ಲಿನ ಉತ್ತಮ ಉದ್ಯೋಗಾವಕಾಶಗಳು, ಹೆಚ್ಚು ಕೂಲಿ, ತಾಂತ್ರಿಕ ಬೆಳವಣಿಗೆ, ಮುಕ್ತ ಅವಕಾಶ ಮುಂತಾದವು ಸೆಳೆಯುವ ಕಾರಣಗಳಾಗಿವೆ. ಹೀಗೆ ತಳ್ಳುವ ಹಾಗೂ ಸೆಳೆಯುವ ಕಾರಣಗಳೆರಡೂ ಅವರು ವಲಸೆ ಹೋಗುವ ತೀರ್ಮಾನಗಳನ್ನು ತೆಗೆದುಕೊಳ್ಳುವಂತೆ ಪ್ರಭಾವ ಬೀರುತ್ತವೆ.

ಕೈಗಾರೀಕರಣ, ಉದ್ಯೋಗಾವಕಾಶಗಳು, ಉನ್ನತ ಮಟ್ಟದ ಶೈಕ್ಷಣಿಕ ಸೌಲಭ್ಯಗಳನ್ನೊಳಗೊಂಡಂತೆ ಅನೇಕ ಅಂಶಗಳು ವಲಸೆಗೆ ಆಕರ್ಷಕ ಅಂಶಗಳಾಗಿ

ವರ್ತಿಸುತ್ತವೆ. ಜನರು ತಮ್ಮ ಮೂಲ ಸ್ಥಳಗಳನ್ನು ಬಿಟ್ಟು ವಲಸೆ ಹೋಗುವುದಕ್ಕೆ ಹೊರದೂಡುವಂತಹ ಅಂಶಗಳು ಅಂದರೆ ಅತಿಯಾದ ಜನಸಂಖ್ಯೆ, ಸಂಪನ್ಮೂಲಗಳ ಕೊರತೆ ಅಥವಾ ಬರಿದಾಗುವಿಕೆ, ವಸತಿ ಮತ್ತು ಆಹಾರದ ಕೊರತೆ, ಯುದ್ಧಗಳು, ನೈಸರ್ಗಿಕ ವಿಪತ್ತುಗಳಾದ ಬರಗಾಲ, ಪ್ರವಾಹ, ಭೂಕಂಪಗಳು, ಜ್ವಾಲಾಮುಖಿ, ಭೂಕುಸಿತ ಮುತಾಂದವುಗಳು ಮಾತ್ರವಲ್ಲದೆ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಘರ್ಷಣೆ, ಸಾಂಕ್ರಾಮಿಕ ರೋಗ, ಕಡು ಬಡತನ ಮುಂತಾದವು ವಲಸೆಯ ವಿಕರ್ಷಕ ಅಂಶಗಳೆಂದು ಕರೆಯುತ್ತಾರೆ.

**ಬಡತನ ಮತ್ತು ಋಣಭಾರ**

ಬಡತನವು ಕೃಷಿ ಕಾರ್ಮಿಕರ ವಲಸೆಯನ್ನು ಹೆಚ್ಚಿಸುವಲ್ಲಿ ಪ್ರಮುಖವಾದ ಅಂಶವಾಗಿದೆ. ಕಡಿಮೆ ಆದಾಯ, ಕಡಿಮೆ ಕೃಷಿ ಉತ್ಪಾದಕತೆ, ತಂತ್ರಜ್ಞಾನದ ಕೊರತೆ, ಬಂಡವಾಳದ ಕೊರತೆ, ಸಡಿಲಗೊಳ್ಳುತ್ತಿರುವ ಕೃಷಿ ಆರ್ಥಿಕತೆ, ಸಣ್ಣ ಹಿಡುವಳಿ, ಹೆಚ್ಚುತ್ತಿರುವ ಕೃಷಿ ವೆಚ್ಚ ಮುಂತಾದ ಅಂಶಗಳು ಕೃಷಿಕರು ಮತ್ತು ಕೃಷಿಕರನ್ನು ಕೃಷಿಯಿಂದ ವಿಮುಖರಾಗುವಂತೆ ಮಾಡುತ್ತಿದೆ. ಇದರೊಂದಿಗೆ ಶಾಶ್ವತ ಋಣಭಾರವು ಕೂಡ ಕೃಷಿ ಕಾರ್ಮಿಕರು ವಲಸೆ ಹೋಗಲು ಪ್ರಮುಖವ ಕಾರಣವಾಗಿದೆ.

**ವಲಸೆಯ ಪರಿಣಾಮಗಳು**

ವಲಸೆಯ ಪರಿಣಾಮವು ಬಹುಮುಖಿಯಾಗಿದೆ ಮತ್ತು ಕಳುಹಿಸುವ ಮತ್ತು ಸ್ವೀಕರಿಸುವ ಪ್ರದೇಶಗಳ ಮೇಲೆ ದೂರಗಾಮಿ ಪರಿಣಾಮಗಳನ್ನು ಉಂಟುಮಾಡಬಹುದು. ವಲಸೆಯಿಂದಾಗಿ ಧನಾತ್ಮಕ ಮತ್ತು ಋಣಾತ್ಮಕ ಎರಡೂ ರೀತಿಯ ಪರಿಣಾಮಗಳನ್ನು ಕಾಣಬಹುದಾಗಿದೆ.

**ಧನಾತ್ಮಕ ಪರಿಣಾಮ**

ವಲಸೆಯಿಂದ ಜನರ ನಡುವಿನ ನಿರುದ್ಯೋಗ ಪ್ರಮಾಣ ಕಡಿಮೆಯಾಗಿ ಉತ್ತಮ ಉದ್ಯೋಗ ಅವಕಾಶಗಳು ದೊರೆಯುತ್ತವೆ. ಇದರಿಂದಾಗಿ ಜನರ ಜೀವನದ ಗುಣಮಟ್ಟ ಸುಧಾರಿಸುತ್ತದೆ. ಇದಲ್ಲದೆ ವಿವಿಧ ಸಂಸ್ಕೃತಿಯ ಜನರು ಒಂದೆಡೆ ಸೇರುವುದ್ದರಿಂದ ಅವರ ನಡುವೆ ಸಹೋದರತ್ವ ಭಾವನೆ ಮೂಡುತ್ತದೆ. ಹೊಸ ಸಂಸ್ಕೃತಿ, ಪದ್ಧತಿಗಳು ಮತ್ತು ಭಾಷೆಗಳ ಬಗ್ಗೆ ಜನರು ಕಲಿಯುವುದರಿಂದ ಅವರ ಸಾಮಾಜಿಕ ಜೀವನವನ್ನು ಸುಧಾರಿಸಲು ಕೂಡ ಇದು ಸಹಾಯ ಮಾಡುತ್ತದೆ. ನುರಿತ ಮತ್ತು ನೈಪುಣ್ಯತೆ ಹೊಂದಿರುವ ಕಾರ್ಮಿಕರ ವಲಸೆಯು ಆ ಪ್ರದೇಶದ ಆರ್ಥಿಕ ಬೆಳವಣಿಗೆಗೆ ಕಾರಣವಾಗುತ್ತದೆ. ಅಲ್ಲದೆ ಅವರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಉತ್ತಮ ಅವಕಾಶಗಳು ದೊರೆಯುತ್ತವೆ. ಜನಸಂಖ್ಯಾ ಬಾಹುಳ್ಯ ಪ್ರದೇಶದಿಂದ ವಲಸೆ ಹೋಗುವುದ್ದರಿಂದ ಅಲ್ಲಿ ಜನಸಾಂದ್ರತೆ ಕಡಿಮೆಯಾಗುತ್ತದೆ.

**ಋಣಾತ್ಮಕ ಪರಿಣಾಮ**

ವಲಸೆ ಅನೇಕ ಧನಾತ್ಮಕ ಅಂಶಗಳನ್ನು ಹೊಂದಿದ್ದರೂ ಕೂಡ ಅಷ್ಟೆ ಪ್ರಮಾಣದ ಋಣಾತ್ಮಕ ಪರಿಣಾಮಗಳನ್ನು ಬೀರುತ್ತದೆ. ನಗರ ಪ್ರದೇಶಗಳಿಗೆ ಜನರ ಒಳಹರಿವು ಹೆಚ್ಚುವುದ್ದರಿಂದ ಮೂಲಭೂತ ಸೌಲಭ್ಯಗಳ ಕೊರತೆಯುಂಟಾಗುತ್ತದೆ. ಜೊತೆಗೆ ಜನಸಾಂದ್ರತೆ ಹೆಚ್ಚಿ ಪ್ರತಿ ಕ್ಷೇತ್ರದಲ್ಲಿಯೂ ಕೂಡ ಪೈಪೋಟಿ ಹೆಚ್ಚುತ್ತದೆ. ಹೆಚ್ಚಿನ ಜನಸಂಖ್ಯೆಯು ನೈಸರ್ಗಿಕ ಸಂಪನ್ಮೂಲಗಳು, ಸೌಕರ್ಯಗಳು ಮತ್ತು ಸೇವೆಗಳ ಮೇಲೆ ಹೆಚ್ಚಿನ ಒತ್ತಡವನ್ನು ಉಂಟುಮಾಡುತ್ತದೆ. ನಗರ ಪ್ರದೇಶಗಳಲ್ಲಿ ನೈಸರ್ಗಿಕ ಪರಿಸರ ಮತ್ತು ಶುದ್ಧ ಗಾಳಿ ಇಲ್ಲದ ಕಾರಣ ಹಳ್ಳಿಗರು ನಗರ ಪ್ರದೇಶದಲ್ಲಿ ಬದುಕುವುದು ಕಷ್ಟವಾಗುತ್ತದೆ. ವಲಸೆಯು ಒಂದು ಸ್ಥಳದ ಜನಸಂಖ್ಯೆಯನ್ನು ಬದಲಾಯಿಸುವುದ್ದರಿಂದ ಜನಸಂಖ್ಯೆಯ ವಿತರಣೆಯು ಅಸಮವಾಗುತ್ತದೆ. ಬಡತನದಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆ, ಶಿಕ್ಷಣ ಅಥವಾ ಆರೋಗ್ಯ ದೊರೆಯುವುದಿಲ್ಲ. ಕೊಳೆಗೇರಿ ಪ್ರದೇಶಗಳು ಹೆಚ್ಚಿ ಅನೈರ್ಮಲ್ಯ ಪರಿಸ್ಥಿತಿ ಉಂಟಾಗುತ್ತದೆ. ಸ್ಥಳೀಯರಿಂದವಲಸಿಗರುಶೋಷಣೆಗೆ ಒಳಗಾಗುತ್ತಾರೆ.

**ಶಿಫಾರಸ್ಸುಗಳು**

- ಸ್ಥಳೀಯ ಮಟ್ಟದಲ್ಲಿ ಜೀವನೋಪಾಯದ ಆಯ್ಕೆಗಳನ್ನು ಹುಟ್ಟುಹಾಕಲು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದು ಮತ್ತು ಈ ಕಾರ್ಯಕ್ರಮ ಕುರಿತು ಜಾಗೃತಿ ಮೂಢಿಸುವುದು.
- ಕೃಷಿಕರಿಗೆ ಬೀಜಗಳು, ಗೊಬ್ಬರ ಮೊದಲಾದವುಗಳನ್ನು ಕಡಿಮೆ ದರದಲ್ಲಿ ಒದಗಿಸುವುದು ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸಬೇಕು.
- ಮಹಿಳಾ ಕೆಲಸಗಾರರ ಹಕ್ಕುಗಳ ರಕ್ಷಣೆ ಮತ್ತು ಕೆಲಸದ ಸ್ಥಳದಲ್ಲಿ ಅವರ ಸುರಕ್ಷತೆ ಗಮನಿಸುವ ಸಂಘಟನೆಗಳು ಮತ್ತು ಘಟಕಗಳ ಬಲವರ್ಧನೆ ಮಾಡುವುದು.
- ಕೆಲಸಗಾರರಿಗೆ ಅವರ ಹಕ್ಕುಗಳ ಕುರಿತು ತಿಳುವಳಿಕೆ ನೀಡಲು ನಿಯಮಿತವಾಗಿ ತರಬೇತಿ ಕಾರ್ಯಾಗಾರಗಳನ್ನು ಸಂಘಟಿಸಲು ಅವಕಾಶ ಕಲ್ಪಿಸುವುದು
- ಸ್ಥಳೀಯ ಮಟ್ಟದಲ್ಲಿ ಉದ್ಯೋಗಾವಕಾಶ ಕಲ್ಪಿಸಲು ಕ್ರಮಕೈಗೊಳ್ಳುವುದು.
- ಸ್ಥಳೀಯ ಮಟ್ಟದಲ್ಲಿ ಇತರ ಅಭಿವೃದ್ಧಿ ಕಾರ್ಯಕ್ರಮಗಳು/ಯೋಜನೆಗಳ ಜೊತೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ ಜೋಡಿಸುವುದು

**ಉಪಸಂಹಾರ**

ಪ್ರಸ್ತುತ ಅಧ್ಯಯನದಿಂದ ಬಹುತೇಕ ಕೃಷಿ ಕಾರ್ಮಿಕರು ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ವಲಸೆ ಹೋದ ಕೃಷಿಕಾರ್ಮಿಕರಲ್ಲಿ ಬಹುತೇಕರು ಕಟ್ಟಡ ಕಾರ್ಮಿಕರಾಗಿ, ದಿನಗೂಲಿ ನೌಕರರಾಗಿ ದುಡಿಯುತ್ತಾರೆ. ಅಲ್ಪ ಪ್ರಮಾಣದಲ್ಲಿ ವ್ಯಾಪಾರ, ಭದ್ರತಾ ಸಿಬ್ಬಂದ್ದಿಗಳಾಗಿ ದುಡಿಯುತ್ತಾರೆ. ವಲಸೆ ಹೋದವರು ವಸತಿ ಸಮಸ್ಯೆ, ಹೊಂದಾಣಿಕೆ ಸಮಸ್ಯೆ, ಭಾಷಾ ಸಮಸ್ಯೆ ಮುಂತಾದವುಗಳಿಂದ ಬಳಲುತ್ತಾರೆ. ವಲಸೆ ಹೋಗುವಾಗ ಬಹುತೇಕ ಕುಟುಂಬಗಳು ಮಕ್ಕಳನ್ನು ತಮ್ಮೊಟ್ಟಿಗೆ ಕರೆದುಕೊಂಡು ಹೋಗುವುದ್ದರಿಂದ ಶಿಕ್ಷಣದಿಂದ ವಂಚಿತರಾಗುತ್ತಾರೆ. ಇಂತಹ ಸಮಸ್ಯೆಗಳಿಂದ ಕಾರ್ಮಿಕರನ್ನು ಮುಕ್ತಗೊಳಿಸಲು ಸಾಧ್ಯವಾದಷ್ಟು ಸ್ಥಳೀಯವಾಗಿ ಉದ್ಯೋಗ ದೊರಕುವಂತೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಮನ್‌ನರೇಗಾ ಉತ್ತಮ ಯೋಜನೆಯಾಗಿದೆ. ಆದರೆ ಅನುಷ್ಠಾನದಲ್ಲಿ ಅಧಿಕಾರಿಗಳು ಪೂರ್ಣಪ್ರಮಾಣದ ಆಸಕ್ತಿ ತೋರಿಸಬೇಕಿದೆ

**ಪರಾಮರ್ಶನ ಗ್ರಂಥಗಳು**


- ದೊಡ್ಡಮನಿ ಕೆ.ಎನ್. (2014). ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಮಹಾರಾಷ್ಟಕ್ಕೆ ಕೃಷಿ ಕಾರ್ಮಿಕರ ವಲಸೆ ಕುರಿತು ಅಧ್ಯಯನ. *ಜರ್ನಲ್ ಆಫ್ ಹ್ಯುಮಾನಿಟೀಸ್ ಅಂಡ್ ಸೋಶಿಯಲ್ ಸೈನ್ಸ್.* 19(5).
- ಗುಂಡಪ್ಪ ಮತ್ತು ಅಶೋಕ್ ಆಂಟೋನಿ ಡಿಸೋಜಾ. ಕೃಷಿ ಕಾರ್ಮಿಕರ ವಲಸೆ ಮತ್ತು ಕೃಷಿ ಕ್ಷೇತ್ರದ ಮೇಲೆ ಅದರ ಪ್ರಭಾವ. *ಜರ್ನಲ್ ಆಫ್ ಸೋಶಿಯಲ್ ಸೈನ್ಸಸ್.*
- ಲೇಖಿ ಆರ್.ಕೆ. ಮತ್ತು ಜೋಗಿಂದರ್ ಸಿಂಗ್. (2015). *ಅಗ್ರಿಕಲ್ಚರಲ್ ಎಕನಾಮಿಕ್ಸ್ ಆನ್ ಇಂಡಿಯನ್ ಪರ್ಸ್ಪೆಕ್ಟಿವ್.* ಕಲ್ಯಾಣಿ ಪಬ್ಲಿಷರ್ಸ್.
- *ಸೆನ್ಸಸ್ ರಿಪೋರ್ಟ್–2011,* ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ.
- ವಾನಿ ಎಂ.ಎಚ್., ಶಾಹಿದ್ ಯೂಸುಫ್, ಎಸ್.ಎಚ್. ಬಹಾ ಮತ್ತು ಎಸ್.ಎ. ವಾನಿ (2011). ಕೃಷಿ ಕಾರ್ಮಿಕರ ವಲಸೆ: ಕಾರಣಗಳು

ಮತ್ತು ಪರಿಣಾಮಗಳು. *ಸಂಶೋಧನಾ ವಿಮರ್ಶೆ*, 24.

- ವೇಣು ಬಿ.ಎನ್. ಉಮೇಶ್ ಕೆ.ಬಿ. ಮತ್ತು ಗಡ್ಡಿ ಜಿ.ಎಂ. (2016) ಭಾರತದ ಕರ್ನಾಟಕ ರಾಜ್ಯದಲ್ಲಿ ಕೃಷಿ ಕಾರ್ಮಿಕರ ವಲಸೆ ಮತ್ತು ರವಾನೆ. *ಇಂಟರ್ನ್ಯಾಷನಲ್ ಜರ್ನಲ್ ಆಫ್ ಅಗ್ರಿಕಲ್ಚರ್ ಸೈನ್ಸಸ್*, 8.(58), 0975–9107

- Carr, D. L. (2008). Population and deforestation: why rural migration matters. *Progress in Human Geography*, *33*(3), 355–378. https://doi.org/10.1177/0309132508096031
- Kalpana Bardhan (1973). Factors affecting wage rates for agricultural labour. Economic and Political Weekly. *Economic and Political weekly*. 8(26).
- Nussbaum, M. C. (2000b). Women and human development: the capabilities approach. *Choice Reviews Online*, *38*(01), 38–0369. https://doi.org/10.5860/choice.38-0369
- Taylor, J. E. (2010). Agricultural labor and migration policy. *Annual Review of Resource Economics*, *2*(1), 369–393. https://doi.org/10.1146/annurev-resource-040709-135048